ಎಸ್.ಎನ್.ಮಹಾಬಲರಾವ್, ಎನ್ಆರ್‌ಪುರ

*ಮೂಗು ಹಿಡಿದುಕೊಂಡು ಕೂರಲು ಕಾಲ ಬಿಡುತ್ತಿಲ್ಲವಲ್ಲ?*



ಕೂರುವುದಷ್ಟೇ ಅಲ್ಲ, ಮೂಗು ಹಿಡಿದೇ ಇರಲು ಸುಲಭವಾದ ಉಪಾಯವಿದೆ. ತಿಪ್ಪೆಗುಂಡಿಯ ಪಕ್ಕಕ್ಕೆ ಮನೆ ಬದಲಾಯಿಸಿ.

ಜಾಕೋಬ್ ಡಿಸೋಜ, ಕುರುವಳ್ಳಿ

*ಮನಸ್ಸಿಗೆ ತುಂಬಾ ನೋವಾದಾಗ ಅಳು ಏಕೆ ಬರುತ್ತೆ?*

ಮನೋಸಮುದ್ರದಲ್ಲಿ ನೋವಿನ ಕಂಪನಗಳು ಉಂಟಾದಾಗ ಮೇಲೆದ್ದು ಬರುವ ಸುನಾಮಿಯೇ ಅಳು.

ಆರ್. ನಾಗರಾಜ್, ಗೊರೂರು

*ಮನದಂಗಳದಲ್ಲಿ ಚುಕ್ಕಿ ಇಟ್ಟು, ಚಿತ್ತಾರ ಬಿಡಿಸದೆ ಹಾಗೆಯೇ ಹೋದಳಲ್ಲಾ...?*

ಹ್ಹ! ಆಕೆ ಇಟ್ಟದ್ದು ಚುಕ್ಕಿಯಲ್ಲ, ಫುಲ್‌ಸ್ಟಾಪ್!

ಎಂ.ಎಸ್. ಧರ್ಮೇಂದ್ರ, ದೊಡ್ಡಮಗ್ಗೆ

*ಫೋಟೋಗಾಗಿ ಕಸಗುಡಿಸುವ ಭಂಗಿಯಲ್ಲಿ ಪೋಸ್ ಕೊಡುವ ರಾಜಕಾರಣಿಗಳನ್ನು ಏನೆನ್ನಬೇಕು?*



ಅವರ ವಿಷಯ ಬಿಡಿ; ಪಾಪ ಪೊರಕೆ! ಇಂತಹ ಕೊಳಕರ ಕೈಲಿ ಮುಟ್ಟಿಸಿಕೊಂಡು ಮೈಲಿಗೆಯಾಗಿ ಹೋಯಿತು!

ಇ. ಜಯಪ್ರಕಾಶ್, ಚಿತ್ರದುರ್ಗ

*ಒಡವೆಗಳನ್ನು ಧರಿಸುವವರಿಗೆ ಏಕೆ ಭಾರವಾಗುವುದಿಲ್ಲ? ಕೊಡಿಸುವವರಿಗೆ ಏಕೆ ಭಾರವಾಗುತ್ತದೆ?*

ಸರಿಯೇ; ಕೊರಳಿಗೆ ಬಂದದ್ದು ಹಗುರ, ಕುತ್ತಿಗೆಗೆ ಬಂದದ್ದು ಭಾರ!

ಡಾ. ಸೀಮಂತಿನಿ ದೇಸಾಯಿ, ವೈಟ್‌ಫೀಲ್ಡ್

*ಈ ಪದ್ಯವನ್ನು ಪೂರ್ತಿಗೊಳಿಸಿ ರಾಂ – 'ರಾಮಂ ರಮಮ್ ರಮಮಮ್ ರ!'*

ರಾಮಧ್ಯಾನೇ ಸ್ಥಿತಾ ಸೀತಾ ರಾಮಸ್ಕಂದಸ್ಯ ದರ್ಶನಾತಾರಾಮೇರಾಮಂಸ್ಮೃತ್ವಾಹ ರಾಮಂ ರಮಮ್ ರಮಮಮ್ ರ!

ಎಸ್.ಜಿ. ಕರನಂದಿ, ಹುನಗುಂದ

*ಮನೆಯ ಸ್ಥಾನಮಾನಗಳು ಯಾರಿಂದ ವೃದ್ಧಿಸುತ್ತವೆ?*

ನ್ಯೂಸ್‌ಚಾನಲ್‌ಗಳ ಗೃಧ್ರದೃಷ್ಟಿಗೆ ಬೀಳದೆ ಜೀವಿಸುವ ಸದಸ್ಯರಿಂದ.

ಬಿ.ಎಸ್.ನಾರಾಯಣಸ್ವಾಮಿ, ಬೋಧನಹೊಸಹಳ್ಳಿ

*ಪ್ರೇಯಸಿ ಪ್ರೀತಿಸುವಾಗ ದೇವತೆ; ಪ್ರೀತಿಸಿದ ಮೇಲೆ?*

ದುರ್ದೈವ!

ಎಸ್.ಎಂ. ಅರ್ಪಣ್, ಮೈಸೂರು

*ನಾನೂ ಪ್ರಸಿದ್ಧ ಲೇಖಕಿಯಾಗುವ ದಿನ ಬರುತ್ತೆ ಅಂತೀರಾ?*

ಬೇರೆ ಭಾಷೆಯಲ್ಲಿ ಬರೆದರೆ ಸಾಧ್ಯ. ಕನ್ನಡಿಗರಲ್ಲಿ ಕೊಂಡಾಡುವ, ಕೊಂಡು ಓದುವ ಸಂಸ್ಕೃತಿ ವಿರಳ.

ಟಿ.ಎಂ. ಮಾನಪ್ಪ, ಶಿವಮೊಗ್ಗ

*ಭಾಗ್ಯದ ಲಕ್ಷ್ಮಿ ಬರುವುದು ಶುಕ್ರವಾರವೇ ಏಕೆ?*

ರಜಾದಿನಗಳಾದ ಶನಿ ಮತ್ತು ಭಾನುವಾರ ಝುಂಮ್‌ಮ್ ಎಂದು ಷಾಪಿಂಗ್ ಮಾಡಲು!

ನಾಗವೇಣಿ ಸೋಮಶೇಖರ್, ಮೈಸೂರು

*ಸತ್ತವರಿಗೆ ಸ್ಮಾರಕ, ಭವನ ಕಟ್ಟುವ ಬದಲು ಅದೇ ಹಣವನ್ನು ಅವರ ಹೆಸರಲ್ಲೇ ಜನೋಪಯೋಗಿ ಕಾರ್ಯಗಳಿಗೆ ಬಳಸಬಹುದಲ್ಲವೆ?*

ಜನೋಪಯೋಗಿ ಕಾರ್ಯಗಳನ್ನು ಜನ ಬೇಗ ಮರೆತುಬಿಡುತ್ತಾರಲ್ಲ! ಜನರ ಮೆಮೊರಿಯಲ್ಲಿ ಇರಕ್ಕೆ ಮೆಮೋರಿಯಲ್ಲೇ ಬೆಸ್ಟು!

ವೈ.ಜಿ. ನರಸಿಂಹನ್, ಶಿವಮೊಗ್ಗ

*ಜ್ಯೋತಿಷ್ಯ ಶಾಸ್ತ್ರದಲ್ಲಿ ನಿಮಗೆ ನಂಬಿಕೆ ಇದೆಯೆ?*

ನಂಬಬಹುದಿತ್ತೇನೋ; ಆದರೆ ಟಿವಿಯಲ್ಲಿ ಬರುವ ಬುರುಡೆ ಜ್ಯೋತಿಷಿಗಳನ್ನು ನೋಡಿದ ನಂತರ......

## ಬಹುಮಾನಿತ ಪ್ರಶ್ನೆ

ಎಂ. ಹಮೀದ್, ವಿಟ್ಲ

*ಮೊನ್ನೆ ನಿಮಗೆ ಸ್ಕೂಟರಲ್ಲಿ ಆಂಟಿ ಡ್ರಾಪ್ ಕೊಟ್ಟದ್ದು ಏಕೆ ಸಾರ್?*

ಓ! ನೋಡಿಯೇಬಿಟ್ಟಿರಾ? ಅದು ಪೋಲಿಯೋ ಡ್ರಾಪ್! ಪಕ್ಕದ ಶಾಲೆಯ ಮಕ್ಕಳಿಗೆ ಹಾಕಲು ಕೊಟ್ಟದ್ದು.

ಡೈರಿ ವಿಶ್ವನಾಥ್, ಬೆಂಗಳೂರು

*ನಿರಾಶೆಗೆ ಕೊನೆ ಇದೆಯೆ?*

ಇದೆ. ನಿರ್ನಿರೀಕ್ಷೆ!

ಮೋಹನ್‌ರಾಜ್ ಎಸ್.ಎ. ಶಿವಮೊಗ್ಗ

*ದಡ್ಡನಾದರೂ ಧಾಂಡಿಗನಾಗಿರಬೇಕು ಎನ್ನುತ್ತಾರಲ್ಲಾ, ಏನಿದರರ್ಥ?*

ಪಾಠದಿಂದ ಸಂಪಾದಿಸಕ್ಕೆ ಆಗ್ದೇ ಇರೋದನ್ನ ಪಟಾಲಂನಿಂದ ಸಂಪಾದಿಸಬಹುದು!

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ

*ಮೋದಿಯವರ ಸ್ವಚ್ಛತಾ ಆಂದೋಲನ 'ಕೈ' ಗುರುತನ್ನೇ ಗುಡಿಸಿಹಾಕಿಬಿಡುತ್ತಿದೆಯಲ್ಲಾ...?*




ಆದರೆ ಸ್ವಚ್ಛತಾ ಆಂದೋಲನ ಆರಂಭಿಸಿದ್ದು 'ಕೈ'ಯೇ ಅಂತೆ – ಖಜಾನೆಯನ್ನು ಸ್ವಚ್ಛವಾಗಿ ತೊಳೆದುಬಿಡುವುದರ ಮೂಲಕ!

ಎಚ್.ಆರ್. ದೇಸಾಯಿ, ರಾಯಚೂರು

*ಭಕ್ತರು ಸ್ವಾಮಿಗಳ ತಲೆಗಿಂತಲೂ ಅವರ ಪಾದಗಳಿಗೇಕೆ ಹೆಚ್ಚು ಮಹತ್ವ ಕೊಡುತ್ತಾರೆ?*

ಫಲ, ಪುಷ್ಪಗಳನ್ನು ನೀಡುವ ವೃಕ್ಷಗಳಿಗೆ ನೀರೆರೆಯುವುದು ಬೇರಿಗೇ ವಿನಹ ಮೇಲ್ತುದಿಗಲ್ಲ. ಇದೂ ಹಾಗೆಯೇ.

ಆರ್. ಮಧುಸೂದನ್, ಹಾಸನ

*ದ್ರೌಪದಿಗೆ ಅಷ್ಟೊಂದು ಕೇಶರಾಶಿ ಇಲ್ಲದಿದ್ದರೆ ಮಹಾಭಾರತ ಅಷ್ಟೊಂದು ಕ್ರೂರ ಆಗುತ್ತಿರಲಿಲ್ಲ ಅಲ್ಲವೇ?*

ಕೆರಳಿದ ಕಾಮಕ್ಕೆ ಹೆರಳಾದರೇನು, ಬೆರಳಾದರೇನು; ದ್ರೌಪದಿಗೆ ಮುಳುವಾದದ್ದು ಅವಳ ಕೇಶರಾಶಿಯಲ್ಲ, ರೂಪರಾಶಿ!

■ ರಾಮ್